**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 647/2014**

ಪಿ.ಡಬ್ಲ್ಯೂ: 7

ಸಿ.ಡಬ್ಲ್ಯೂ: 9

ಸಾಕ್ಷಿದಾರರ ಹೆಸರು : ರಂಗಸ್ವಾಮಿ
ತಂದೆಯ ಹೆಸರು: : ನಾರಾಯಣಪ್ಪ
ವಯಸ್ಸು : **60 ವರ್ಷ**
ಉದ್ಯೋಗ : ನಿವೃತ್ತ ಜ್ಯಾಯಿಂಟ್ ಡೈರೆಕ್ಟರ್
ವಾಸಸ್ಥಳ : ತುಮಕೂರು

**ದಿನಾಂಕ: 06-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

**2008** ರಿಂದ **2013** ರವರೆಗೆ ಚಿಕ್ಕಮಗಳೂರಿನ ಸಹಕಾರಿ ಸಂಘದ ಲೆಕ್ಕ ಪರಿಶೋಧನಾ ಉಪನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾವು ಚಿಕ್ಕಮಗಳೂರಿನ ಎಲ್ಲಾ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಆಯಾಯ ವರ್ಷಗಳ ಲೆಕ್ಕ ಪರಿಶೋಧನೆಯನ್ನು ತಯಾರಿಸುವಂತೆ ಆದೇಶ ನೀಡುತ್ತೇನೆ. ಬಾವಿಕೆರೆ ಕೃಷಿ ಪತ್ತಿನ ಸಹಕಾರ ಸಂಘದ ಪರವಾಗಿ **2012-13** ನೇ ಎಸ್ ನಾರಾಯಣ್ ರವರನ್ನು ಲೆಕ್ಕಪರಿಶೋಧನೆ ನಡೆಸಿ ವರದಿ ನೀಡುವಂತೆ ಆದೇಶ ನೀಡಿರುತ್ತೇನೆ. ಅದರಂತೆ ಎಸ್ ನಾರಾಯಣ್ ರವರು **06-08-2013** ರಿಂದ **30-08-2013** ರವರೆಗೆ ಲೆಕ್ಕ ಪರಿಶೋದನೆಯನ್ನು ಪೂರ್ಣಗೊಳಿಸಿ ವರದಿ ನೀಡಿರುತ್ತಾರೆ. ಸದರಿ ವರದಿಯಲ್ಲಿ ಡಿ.ವಿ.ಆನಂದ್ ಎಂಬ ನೌಕರನು **2,20,130/-** ರೂ ಹಣವನ್ನು ದುರಪಯೋಗಪಡಿಸಿಕೊಂಡಿದ್ದಾನೆಂದು ವರದಿಯನ್ನು ನೀಡಿರುತ್ತಾರೆ. ಈ ಸಂಬಂಧ ನಾನು ಪೊಲೀಸ್ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಟಿ ಆರ್ ಎಸ್ **ವಕೀಲರಿಂದ.**

ಪೊಲೀಸರು ದೂರವಾಣಿ ಮುಖಾಂತರ ನನಗೆ ಕರೆ ಮಾಡಿದ್ದು, ದಿನಾಂಕ ನನಗೆ ನೆನಪಿರುವುದಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾರಾಯಣ್ ರವರು ಪರಿಶೀಲನೆ ಮಾಡಿ ನೀಡಿದ ವರದಿಯನ್ನು ನಾನು ನೋಡಿರುವುದಿಲ್ಲ. 2ನೇ

ಆರೋಪಿಯಾದ ಮಂಜುನಾಥ್ ರವರ ಮೇಲೆ ಯಾವುದೇ ಆರೋಪ ಇರುವುದಿಲ್ಲ ಎಂದರೆ ಸರಿ. ಆಡಿಟ್ ರಿಪೋರ್ಟನ್ನು ನೋಡಿ ಹಣ ದುರುಪಯೋಗ ಆಗಿರುವ ಬಗ್ಗೆ ನನಗೆ ತಿಳಿದುಬಂದಿರುತ್ತದೆ. ದಿಃ 31-08-2013 ರಂದು ಆಡಿಟ್ ನ್ನು ಎಸ್ ನಾರಾಯಣ್ ರವರು ಮುಗಿಸಿರುತ್ತಾರೆ. ನೀವು ಯಾವುದೇ ಆಡಿಟ್ ವರದಿಯನ್ನು ನೋಡಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**